**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ27-02-2025**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಕೆ ಪಿ ಕೆ ವಕೀಲರಿಂದ**

ನಾನು 6 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕಂದಾಯ ದಾಖಲಾತಿಗಳ ಬಗ್ಗೆ ಅರಿವಿರುತ್ತದೆ. ಈ ದಾವೆ ಹೂಡಿದ ನಂತರ ನಾನು ಈ ಪ್ರಕರಣದಲ್ಲಿ ಅಧಿಕಾರ ಪತ್ರ ಪಡೆದಿರುತ್ತೇನೆ. ಸ ನಂ.97/1 ಆಸ್ತಿಯ ಸಲುವಾಗಿ ಸಾಕ್ಷ್ಯ ನುಡಿಯಲು ಅಧಿಕಾರ ಪತ್ರ ಪಡೆದಿರುತ್ತೇನೆ. ಸ ನಂ.97 ರಲ್ಲಿ ಒಟ್ಟು 06 ಎಕರೆ 22 ಗುಂಟೆ ಇರುತ್ತದೆ. ಮೊದಲು ಸದರಿ ಆಸ್ತಿ ಅನಂತರಾಮಯ್ಯರವರಿಗೆ ಸೇರಿದ ಸ್ವತ್ತಾಗಿತ್ತು ಎಂದರೆ ಸರಿ. ಅನಂತರಾಮಯ್ಯರವರಿಗೆ ಎಷ್ಟು ಜನ ಸಹೋದರರು ಇದ್ದರು ಎಂದು ನನಗೆ ಗೊತ್ತಿಲ್ಲ. ಅನಂತರಾಮಯ್ಯರವರಿಂದ ಸದರಿ ಅಸ್ತಿಯಲ್ಲಿ ಪ್ರತಿವಾದಿರವರು 02 ಎಕರೆ 09 ಗುಂಟೆ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಈ ದಾವೆಯಲ್ಲಿ ಸದರಿ 02 ಎಕರೆ 09 ಗುಂಟೆ ಜಮೀನು ಸೇರಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಸ ನಂ.97/2 ಆಗಿರುತ್ತದೆ ಎಂದು ನುಡಿಯುತ್ತಾರೆ. ನಮಗೆ 04 ಎಕರೆ 18 ಗುಂಟೆ ಜಮೀನು ಬೇರೆ ಬೇರೆ ಚಕ್ಕುಬಂದಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಅದು ಒಂದೇ ಚಕ್ಕುಬಂದಿಯಲ್ಲಿ ಇರುತ್ತದೆ. ಕೆಂಗಯ್ಯರವರು 1956-57 ನೇ ಇಸವಿಯಿಂದಲೇ ಗೇಣಿದಾರರಾಗಿದ್ದರು. ಕೆಂಗಯ್ಯರವರು ಈಗ ಮರಣ ಹೊಂದಿರುತ್ತಾರೆ. ಅವರ ಮರಣ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

04 ಎಕರೆ 18 ಗುಂಟೆ ಜಮೀನು ಎರಡು ಬ್ಲಾಕ್ ಇರುತ್ತದೆ. ಒಂದೇ ಸರ್ವೆ ನಂಬರ್ ಗೆ ಎರಡು ಬ್ಲಾಕ್ ಕೊಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಕೆಂಗಯ್ಯ ರವರೇ ಬಸವಯ್ಯ ಎಂದು ತೋರಿಸಲು ದಾಖಲಾತಿ ನೀಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆದರೆ

ದಾಖಲಾತಿಗಳಲ್ಲಿ ಕೆಂಗಯ್ಯ ಃ ಉಃ ಬಸವಯ್ಯ ಎಂದು ನಮೂದಾಗಿದ್ದು ಅದನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ಪ್ರತಿವಾದಿರವರ 02 ಎಕರೆ 09 ಗುಂಟೆ ಜಮೀನು ದಾವಾ ಅಸ್ತಿಗೆ ಲಗತ್ತಾಗಿರುವುದಿಲ್ಲ. ದಾವಾ ಆಸ್ತಿಯ ದಕ್ಷಿಣಕ್ಕೆ ಪ್ರತಿವಾದಿರವರ ಜಮೀನು ಇರುತ್ತದೆ. ಉತ್ತರಕ್ಕೆ ಬಸವಯ್ಯರವರ ಜಮೀನು ಇರುತ್ತದೆ. ದಕ್ಷಿಣಕ್ಕೆ ಪ್ರತಿವಾದಿರವರ ಜಮೀನು ಲಗತ್ತಾಗಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ಪ್ರತಿವಾದಿರವರ ಜಮೀನು ಪಕ್ಕದಲ್ಲಿ ಇದ್ದು ನಮ್ಮ ಜಮೀನಿನಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿರವರ ಜಮೀನನ್ನು ಸೇರಿಸಿ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿರವರು ನಮ್ಮ ವಿರುದ್ಧ ಇದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಚಕ್ಕುಬಂದಿ ಹೂಡಿ ದಾವೆ ಸಲ್ಲಿಸಿದ್ದು ಅದರ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ.

ನಿಪಿ-2 ರಲ್ಲಿ 02 ಎಕರೆ ಹೊಲ ಮತ್ತು 02 ಎಕರೆ ಗದ್ದೆ ಇದೆ ಎಂದು ತೋರಿಸಲಾಗಿದೆ ಎಂದರೆ ಸಾಕ್ಷಿ 04 ಎಕರೆಯೂ ಹೊಲ ಇರುತ್ತದೆ ಎಂದು ನುಡಿಯುತ್ತಾರೆ. ಹೊಲ ಮತ್ತು ಗದ್ದೆ ಎರಡೂ ಬೇರೆ ಬೇರೆ ಎಂದರೆ ಸರಿ. ಹೊಲ ಮತ್ತು ಗದ್ದೆಗಳಿಗೆ ಪ್ರತ್ಯೇಕ ಖಾತೆ ಮತ್ತು ಸರ್ವೆ ನಂಬರ್ ನೀಡುತ್ತಾರೆ ಎಂದರೆ ಸರಿ. ಜಿಲ್ಲಾಧಿಕಾರಿಗಳು ನಮಗೆ 02 ಎಕರೆ 18 ಗುಂಟೆ ಜಮೀನನ್ನು ಮಾತ್ರ ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಅನಂತರಾಮಯ್ಯ ರವರ ಸ್ವತ್ತು ಎಂದು ನಮೂದಾಗಿದೆ ಎಂದರೆ ಸಾಕ್ಷಿ ಅನಂತರಾಮಯ್ಯರವರ ಸ್ವತ್ತೇ ನಮಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ.

ಮಂಜೂರಾತಿ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ-23 ಮಂಜೂರಾತಿ ಪ್ರಮಾಣಪತ್ರವನ್ನು ತಿದ್ದುಪಡಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಮಂಜೂರಾತಿ ಪತ್ರ ನಿಪಿ-23 ರಲ್ಲಿ ಸ ನಂ.97/1 ಎಂಬುದನ್ನು 97/2 ಎಂದು ತಿದ್ದುಪಡಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾಖಲಾತಿಗಳನ್ನು ತಿದ್ದುಪಡಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**